ಇತ್ಯಾದಿ). ಆದರೆ, ಮನುಷ್ಯ ತನ್ನ ಅಸ್ತಿತ್ವ ಉಳಿಸಿಕೊಳ್ಳಲು ಮಾಡುವ ಒದ್ದಾಟಗಳನ್ನು ವೇದಾ ನಮ್ಮ ಮುಂದಿಡುತ್ತಾರೆ. ಆದ್ದರಿಂದಲೇ ಇದು ನಮ್ಮ ಕಥನವಾಗುತ್ತದೆ, ಬದುಕಿನ ಮಹತ್ವದ ಸಂಕೇತವೂ ಆಗುತ್ತದೆ.

ವಾಸ್ತವ ಎನ್ನುವುದು ಮತ್ತೊಂದು ಅರ್ಥದಲ್ಲಿ ಜೀವನ ಮತ್ತು ಅದರ ಅನುಭಗಳ ಒಂದು ಸಾರ ರೂಪವೂ ಆಗಿರುತ್ತದೆ. ಕನ್ನಡದ ಬಹುತೇಕ ವಾಸ್ತವಿಕ ಕಥನಗಳು ನಮಗೆ ಅತ್ಯಂತ ಮುಖ್ಯವಾದ ನೋಟಗಳನ್ನು ಕೊಟ್ಟಿರುವುದು ಸತ್ಯ. ಆದ್ದರಿಂದ ಇದಕ್ಕೆ ಹೆಚ್ಚಿನ ಮಹತ್ವ ಇದೆ. ಅದರ ಜೊತೆಗೆ ಸ್ತ್ರೀ ಮತ್ತು ಅವಳ ನೋಟವನ್ನು ವೇದಾ ಇಲ್ಲಿ ಸವಿವರವಾಗಿ ಹೇಳಿದ್ದಾರೆ. ಹೆಣ್ಣು ಹೆಣ್ಣಿನ ಕಥನವನ್ನು ತುಂಬಾ ಚೆನ್ನಾಗಿ ಹೇಳಲು ಸಾಧ್ಯವಿದೆ ಎನ್ನುವುದಕ್ಕೆ ಈ ಕಾದಂಬರಿ ಒಳ್ಳೆಯ ಉದಾಹರಣೆ. ಸಮಾಜ ಮತ್ತು ನಿರೂಪಣೆ ಹಾಗೂ ಅದರ ಪ್ರಾತಿನಿಧಿಕವಾದ ನೆಲೆಗಳು ಹೇಗೆ ಇರುತ್ತವೆ ಮತ್ತು ಅದರಲ್ಲಿ ಹೆಣ್ಣು ಯಾವ ಪಾತ್ರವನ್ನು ವಹಿಸುತ್ತಾಳೆ ಎನ್ನುವುದನ್ನು ಇದು ನಮಗೆ ಸೂಚಿಸುತ್ತದೆ. ಹೆಣ್ಣಿನ ಎದುರು ಅತ್ಯಂತ ವಿಶಾಲವಾದ ಸೀಮೆಗಳು ಇವೆ. ಅದರಲ್ಲಿ ಭೂಗೋಳವಿದೆ, ನಿತ್ಯದ ಜೀವನ ಮತ್ತು ಅದರ ಸಂಕಟಗಳು ಇವೆ. ವ್ಯಾಪಾರ ಮತ್ತು ಅದರ ಚಿತ್ರಣವೂ ಇದೆ. ಹಾಗೆಯೇ, ಮನುಷ್ಯ ತನ್ನ ಸಂಕಟಕ್ಕೆ ಗಿರವಿ ಅಂಗಡಿಗೆ ಹೋಗಿ ವಿವಶನಾಗುವ ಸಂಗತಿಯೂ ಇದೆ.

ಕಾದಂಬರಿಯ ನಿರೂಪಣೆಯಲ್ಲಿ ಒಂದು ಜೀವ ಚೈತ್ಯನವಿದೆ. ಒಂದು ಕಡೆಯಿಂದ ಇದರಲ್ಲಿ ಕುಟುಂಬ ಮತ್ತು ಅದರ ಮೌಲ್ಯಗಳ ಪ್ರಶ್ನೆ ಕೂಡ ಇದೆ. ಮತ್ತೊಂದು ಕಡೆಯಿಂದ ಇದು ಕುಟುಂಬ ಜೀವನ ಮತ್ತು ಅದರ ಸಾಮಾಜಿಕ ಚಿತ್ರವನ್ನು ಹೇಳುತ್ತದೆ. ಹಾಗೆಂದು ಇದು ಒಂದು ಕುಟುಂಬವನ್ನು ಮಾತ್ರವೇ ನಿರೂಪಿಸುತ್ತದೆ ಎಂದು ಯಾರೂ ತಿಳಿಯಬಾರದು. ವಸಾಹತೋತ್ತರ ಕಾಲದ ಅತ್ಯಂತ ಮಹತ್ವದ ಪಲ್ಲಟಗಳನ್ನು ಈ ಕಾದಂಬರಿ ಹೇಳುತ್ತದೆ. ದೊಡ್ಡತಾಯಿ, ಶಿವಯ್ಯ, ಗಂಗವ್ವ, ಚೆನ್ನಣ್ಣ, ದ್ಯಾಮವ್ವ, ಗೌರಿ, ಅಮ್ಮಣ್ಣೆ ಮುಂತಾದವರು ಇಲ್ಲಿ ಒಂದು ಸಂಕೇತದಂತೆ ಬರುತ್ತಾರೆ. ಅವರು ಜೀವನದ ಮೂಲಕವೇ ಪಾಠ ಕಲಿಯುತ್ತಾರೆ. ಕಾದಂಬರಿಯ ಪ್ರಾರಂಭ ಮತ್ತು ಅಂತ್ಯವು ನಮಗೆ ರೂಪಕದಂತೆ ಕಂಡರೆ ಅಚ್ಚರಿಯಿಲ್ಲ. ಶಿವನ ಸನ್ನಿಧಿಗೆ ಸೇರುವ ದೊಡ್ಡತಾಯಿಯೂ ಇಡೀ ಕಾದಂಬರಿಯಲ್ಲಿ ಮಹತ್ವದ ರೂಪಕದ ಥರ ಕಾಣಿಸುತ್ತಾಳೆ. ಚರಿತ್ರೆ ಎಂದರೆ ಅದು ನಮ್ಮ ಆಲೋಚನೆಯ ಕ್ರಮದ ಸಂಘರ್ಷವಾಗುತ್ತದೆ. ಅದರಲ್ಲಿ ಮೌಲ್ಯದ ಪ್ರಶ್ನೆಗಳೂ ಇವೆ. ಚರಿತ್ರೆಯಲ್ಲಿ ನಮ್ಮ ಕನಸುಗಳ ರೂಪವೂ ಇದೆ. ಚರಿತ್ರೆ ಎಂದರೆ ಅದು ಬರೀ ವಸ್ತುಗಳ ವಿವರಣೆ ಅಲ್ಲ. ಅದರ ಬದಲು ಅದು ಪರಿಕಲ್ಪನೆಗಳ ದ್ವಂದ್ವಾತ್ಮಕವಾದ ಅಧ್ಯಯನವೂ ಆಗಿರುತ್ತದೆ. ಹಾಗೆ ನೋಡಿದರೆ, ಒಂದು ಸಮಾಜದಲ್ಲಿ ವಿವಿಧ ಸಮಾಜಗಳ ಒಕ್ಕೂಟಗಳು ಇರುತ್ತವೆ. ಜನಾಂಗಗಳಿಗೆ ಪರಸ್ಪರ ಸಂಬಂಧ ಮತ್ತು ವೈರತ್ವ ಇರುತ್ತವೆ. ಒಂದು ಜನಾಂಗವು ಇನ್ನೊಂದು ಜನಾಂಗದಿಂದ ಸ್ವೀಕಾರ ಮಾಡುತ್ತದೆ. ಕೆಲವೊಮ್ಮೆ ವಿರೋಧಿಸುತ್ತದೆ. ಆದ್ದರಿಂದ ಚರಿತ್ರೆ ಎಂದರೆ ಅದು ಜನಾಂಗದ ಇತಿಹಾಸವೂ ಹೌದು. ಅದು ಕುಟುಂಬದ ಇತಿಹಾಸವೂ ಆಗಿರುತ್ತದೆ. ಅದರಲ್ಲಿ ಜನರು ಇದ್ದಾರೆ. ವ್ಯಕ್ತಿಗೆ ಚರಿತ್ರೆ ಇರುವ ಹಾಗೆ ಒಂದು ಗುಂಪಿಗೂ ಚರಿತ್ರೆ ಇರುತ್ತದೆ. ಆದ್ದರಿಂದ ವಾಸ್ತವ ಎನ್ನುವುದು ಈ ಸಂಗತಿಗಳನ್ನು ನಾವು ಹೇಗೆ ಗುರುತಿಸುತ್ತೇವೆ ಎನ್ನುವುದರಲ್ಲಿ ಇದೆ. ಒಂದು ಕ್ಷಣವು ದಾಟಿದ ಕೂಡಲೇ ಅದು ಚರಿತ್ರೆ ಆಗುತ್ತದೆ. ಸಮಾಜವು ಪಲ್ಲಟವಾಗುತ್ತಿರುವ ಕ್ರಮವನ್ನು ಇದು ಹೇಳುತ್ತದೆ. ದೊಡ್ಡತಾಯಿ ಈ ಕಾವ್ಯದಲ್ಲಿ ಕೇಂದ್ರ ಪಾತ್ರ. ಅವಳ ಜೊತೆಗೆ ಬಸಕ್ಕ, ಚಂದವ್ವ, ಚೆನ್ನಣ್ಣ, ಬಸಕ್ಕ ಹೀಗೆ ಅನೇಕ ಪಾತ್ರಗಳು ಬಂದು ಈ ಕಾದಂಬರಿಯ ಜೀವನವನ್ನು, ಜೀವವನ್ನು ತುಂಬಿ ಕೊಟ್ಟಿವೆ.

ಕತೆಯನ್ನು ನಾವು ಪರಿಣಾಮಕಾರಿಯಾಗಿ ನಿರೂಪಿಸುವುದು ಅತ್ಯಂತ ಮುಖ್ಯ. ಇದು ಕೂಡ ನಮಗೆ ಉಕ್ತವಾಗದ ಚರಿತ್ರೆಯನ್ನು ಹೇಳುತ್ತದೆ. ಕಾದಂಬರಿಗಳು ನಮ್ಮ ಜೀವನದ ನಿತ್ಯವನ್ನು ಹೇಳಿದರೆ